# ಆಳ್ವಾಸ್ ಕಾಲೇಜಿನ "ಮೈಂಡ್ ವೀವ್ ಫಾರಂ" ನಿಂದ ಶೈಕ್ಷಣಿಕ ಭೇಟಿ

ಆಳ್ವಾಸ್ ಕಾಲೇಜು ಮೂಡುಬಿದಿರೆಯಲ್ಲಿ ಪಠ್ಯೇತರ ಚಟುವಟಿಕೆಗಳಿಗಾಗಿ 30 ಫಾರಂಗಳಿದ್ದು, ಅವುಗಳಲ್ಲಿ ಒಂದಾದ ಮನಃಶಾಸ್ತ್ರ ವಿಭಾಗದ "ಮೈಂಡ್ ವೀವ್ ಫಾರಂ" ತನ್ನ ಶೈಕ್ಷಣಿಕ ಭೇಟಿಯನ್ನು ದಿನಾಂಕ 02-02-2019 ರಂದು ಉಡುಪಿಯ "ಸ್ಪಂದನಾ ಪುನರ್ವಸತಿ ಕೇಂದ್ರ"ದಲ್ಲಿ ಹಮ್ಮಿಕೊಂಡಿತ್ತು. ಪುನರ್ವಸತಿ ಕೇಂದ್ರದ ನಿರ್ದೇಶಕರಾದ ಜನಾರ್ಧನ್ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, "ವಿಕಲ ಚೇತನ ವಯಸ್ಕರನ್ನು ಹಲವರು ಹೊರೆಯಾಗಿ ಕಾಣುತ್ತಾರೆ. ಬುದ್ದಿಮಾಂದ್ಯ ಮತ್ತು ವಿಕಲಚೇತನ ಮಕ್ಕಳಿಗೆ ಮಾತ್ರ ಸರಕಾರದಿಂದ ಧನಸಹಾಯವಿದೆ, ಆದರೆ ಅವರು ವಯಸ್ಕರಾದಂತೆ ಯಾವ ರೀತಿಯ ಸಹಾಯವೂ ಸರಕಾರದಿಂದ ಲಭಿಸಿಲ್ಲ. ಇವರನ್ನು ಬೀದಿಪಾಲು ಮಾಡುವವರೇ ಹೆಚ್ಚು, ಅವರ ಕಡೆ ಸಮಾಜವೂ ನಿರ್ಲಕ್ಷ್ಯ ತೋರಿಸುತ್ತದೆ. ಹಾಗಾಗಿ ಈ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಇಲ್ಲಿರುವ ನಿವಾಸಿಗಳು ಸಣ್ಣ ಪ್ರಮಾಣದ ತರಬೇತಿಯನ್ನು ಪಡೆದು ತಮ್ಮಲ್ಲಿ ಧೈರ್ಯ ಕಂಡುಕೊಂಡು ಸಣ್ಣ ಪುಟ್ಟ ಅಲಂಕಾರಿಕ ವಸ್ತುಗಳನ್ನು ತಯಾರಿಸುವಲ್ಲಿ ಮತ್ತು ಸ್ವ-ಉದ್ಯೋಗವನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಮಾನವ ಸಂಬಂಧ ಬೆಳೆಸುವ ಮೂಲಕ ಸಮಾಜಕ್ಕೆ ಒಂದು ಉತ್ತಮ ಕೊಡುಗೆಯನ್ನು ನೀಡುವುದೂ ನಮ್ಮ ಗುರಿ." ಎಂದು ಅವರು ಹೇಳಿದರು.

'ಮೈಂಡ್ ವೀವ್ ಫಾರಂ'ನಿಂದ 45 ಮಂದಿ ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದು ಸಂವಾದ ಕಾರ್ಯಕ್ರಮ ನಡೆಸಿ, ಮನರಂಜನಾ ಕಾರ್ಯಕ್ರಮವನ್ನು ನೀಡಿ ಅಲ್ಲಿನ ನಿವಾಸಿಗಳ ಮನಮುಟ್ಟುವಲ್ಲಿ ಯಶಸ್ವಿಯಾದರು. ವಿದ್ಯಾರ್ಥಿಗಳು ಸ್ವಯಿಚ್ಛೆಯಿಂದ ತಮ್ಮಿಂದಾದಷ್ಟು ಧನಸಹಾಯವನ್ನು ಮಾಡಿದರು. ಈ ಸಂದರ್ಭದಲ್ಲಿ, ಮನಃಶಾಸ್ತ್ರ ವಿಭಾಗದ ಕು. ಜೊಸ್ವಿಟಾ ಡೇ'ಸಾ ಮತ್ತು ವಾಣಿಜ್ಯಶಾಸ್ತ್ರ ವಿಭಾಗದ ಶ್ರೀ. ಅಶೋಕ ಕೆ. ಜಿ. ಇವರು ಉಪಸ್ಥಿತರಿದ್ದರು.

*****************************


SPANDANA
VOCATIONAL REHABILITATION CENTRE
FOR MENTALLY CHALLENGED PERSON
(A Unit of Chaithanya Charitable Trust)
ALVA'S COLLEGE, MOODUBIDIRE
(A Unit of Alva's Education Foundation (R), Moodubidiri)
MIND VIEW FORUM
Eat
Well


Eat
SUPPORT
LOCAL


SPANDANA
VOCATIONAL REHABILITATION CENTRE
FOR MENTALLY CHALLENGED PERSON
(A Unit of Chaithanya Charitable Trust)
MIND VIEW FORUM
Eat Well